ಋ) ಹೌದು, ಇದಕ್ಕಾಗಿ ಜಲಾನಯನ ಅಭಿವೃದ್ಧಿ ಇಲಾಖೆಯ 2007–08ನೇ ಸಾಲಿನಲ್ಲಿ ರೂ. 11854.48 ಲಕ್ಷಗಳನ್ನು ಮೀಸಲಿಟ್ಟಿದೆ.

ಎ) ಸಂಪನ್ಮೂಲಗಳ ಲಭ್ಯತೆ ಆಧಾರದ ಮೇಲೆ ಇದನ್ನು ಪರಿಶೀಲಿಸಬೇಕಾಗಿದೆ.

1200 (1283) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡದ ಕೆ.ಡಿ.ಸಿ.ಸಿ. ಬ್ಯಾಂಕಿನ ಪುನಃಶ್ಚೇತನಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಕೆ.ಡಿ.ಸಿ.ಸಿ. ಬ್ಯಾಂಕ್‌ಗೆ ಬಡ್ಡಿ ಮನ್ನಾದಿಂದಾಗಿ ಬರಬೇಕಾದ ಹಣವೆಷ್ಟು/ ಎಷ್ಟು ಹಣ ಬಿಡುಗಡೆಯಾಗಿದೆ? ಇದರಿಂದ ಸಂಸ್ಥೆಗೆ ಆದ ಹಾನಿ ಎಷ್ಟು? (ವಿವರ ನೀಡುವುದು)

ಇ) ಈ ಬ್ಯಾಂಕನ್ನು ಪುನಃಶ್ಚೇತನಗೊಳಿಸಿ ಆಡಳಿತ ಮಂಡಳಿ ಚುನಾವಣೆ ಮಾಡಲಾಗುವುದೆ?

ಶ್ರೀ ಜಿ. ಟಿ. ದೇವೇಗೌಡ (ಸಹಕಾರ ಸಚಿವರು) :

ಅ)

1) ಬ್ಯಾಂಕಿನ ಆಡಳಿತ ಮಂಡಳಿಯನ್ನು ರದ್ದುಪಡಿಸಿ ಆಡಳಿತಗಾರರನ್ನು ನೇಮಕ ಮಾಡಲಾಗಿದೆ. ಸದ್ಯಕ್ಕೆ ಧಾರವಾಡ ಜಿಲ್ಲಾಧಿಕಾರಿಯವರು ಬ್ಯಾಂಕಿನ ಆಡಳಿತ–ಗಾರರಾಗಿ ಕೆಲಸ ನಿರ್ವಹಿಸಿದ್ದಾರೆ.
2) ಸರ್ಕಾರದ ಹಂತದಲ್ಲಿ ಉನ್ನತ ಮಟ್ಟದ ಸಭೆಗಳನ್ನು ಆಗಾಗ್ಗೆ ಜರುಗಿಸಲಾಗಿದೆ.
3) ಸಾಲ ವಸೂಲಾತಿಗಾಗಿ ಏಕಕಾಲಿಕ ಸಾಲ ತೀರುವಳಿ ಯೋಜನೆಯನ್ನು ಜಾರಿಗೊಳಿಸಿದೆ.
4) ಬ್ಯಾಂಕಿನ ಸಾಲ ವಸೂಲಾತಿಗಾಗಿ ನೋಡಲ್ ಅಧಿಕಾರಿ ಯನ್ನು ನೇಮಿಸಲಾಗಿದೆ.
5) ಬ್ಯಾಂಕಿನ ವೆಚ್ಚವನ್ನು ತಗ್ಗಿಸಲು ಅಶಕ್ತವಾಗಿದ್ದ ಸುಮಾರು 50 ಶಾಖೆಗಳನ್ನು ಮುಚ್ಚಲಾಗಿದೆ.
6) ಸರ್ಕಾರವು ಕೆ.ಸಿ.ಸಿ.ಬ್ಯಾಂಕ್ ನ, ಧಾರವಾಡ ಇದರ ಪುನಃಶ್ಚೇತನಕ್ಕಾಗಿ ರೂಪಿಸಿದ ವಿಶೇಷ ಪ್ಯಾಕೇಜ್‌ನಲ್ಲಿ

ದಿನಾಂಕ: 30–06–2003 ಕ್ಕೆ ಸುಸ್ತಿ ಇದ್ದು, ದಿನಾಂಕ: 31–03–2004 ರೊಳಗಾಗಿ ಸಂಬಂಧಪಟ್ಟ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳಿಗೆ ರೈತರು ಸುಸ್ತಿ ಕೃಷಿ ಸಾಲಗಳ ಅಸಲನ್ನು ಮರುಪಾವತಿಸಿದಲ್ಲಿ ಅಂತಹ ರೈತರ ಅಲ್ಪಾವಧಿ ಮತ್ತು ಮಧ್ಯಮಾವಧಿ ಕೃಷಿ ಸಾಲಗಳ ಮೇಲಿನ ಪೂರ್ಣ ಬಡ್ಡಿಯನ್ನು ಮನ್ನಾ ಮಾಡಿರುತ್ತದೆ. ಈ ಮನ್ನಾದಿಂದ ಉಂಟಾದ ನಷ್ಟನ್ನು ರೂ.50.00 ಕೋಟಿಗೆ ಸೀಮಿತಗೊಳಿಸಿ ಸರ್ಕಾರ, ಅಪೆಕ್ಸ್ ಬ್ಯಾಂಕ್ ಮತ್ತು ಕೆ.ಸಿ.ಸಿ.ಬ್ಯಾಂಕ್ ನಿ, ಧಾರವಾಡ ಅನುಕ್ರಮವಾಗಿ ಶೇ:50:25:25 ಅನುಪಾತದಲ್ಲಿ ಭರಿಸತಕ್ಕದ್ದೆಂದು ಆದೇಶಿಸಿರುತ್ತದೆ. ಸರ್ಕಾರದ ವತಿಯಿಂದ ಬಿಡುಗಡೆ ಮಾಡಬೇಕಾದ 25.00 ಕೋಟಿ ರೂ.ಗಳನ್ನು ಮತ್ತು ಅಪೆಕ್ಸ್ ಬ್ಯಾಂಕಿನ ವತಿಯಿಂದ ಬಿಡುಗಡೆ ಮಾಡಬೇಕಾದ 12.50 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

7) ಅಪೆಕ್ಸ್ ಬ್ಯಾಂಕು ತನ್ನ ಸ್ವಂತ ನಿಧಿಗಳಿಂದ ರೂ. 73.00 ಕೋಟಿಗಳ ಅಲ್ಪಾವಧಿ ಕೃಷಿ ಪತ್ತಿನ ಮಿತಿಯನ್ನು ಮಂಜೂರು ಮಾಡಿರುತ್ತದೆ.

8) ಮುಂಗಾರು 2002ರ ಬಡ್ಡಿ ಮನ್ನಾ ಯೋಜನೆಯಡಿಯಲ್ಲಿ ಬ್ಯಾಂಕಿಗೆ ಇದುವರೆವಿಗೆ ರೂ.3.18 ಕೋಟಿ ಬಿಡುಗಡೆ ಗೊಳಿಸಲಾಗಿದೆ.

9) 2005–06ನೇ ಸಾಲಿನ ಬಡ್ಡಿ ದಂಡದ ಬಡ್ಡಿ ಮನ್ನಾ ಯೋಜನೆಯಡಿ ಬ್ಯಾಂಕಿಗೆ ಇದುವರೆಗೆ ರೂ, 54.30 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

10) ಠೇವಣಿದಾರರಿಗೆ ರೂ, 24.05 ಕೋಟಿ ಠೇವಣಿ ಹಣ ವಾಪಸ್ಸು ಮಾಡಲಾಗಿದೆ. (ಏಪ್ರಿಲ್–2006 ರಿಂದ 21–3–2007 ರವರೆಗೆ)

ಆ) 2003–04ನೇ ಸಾಲಿನ ಬರಪರಿಹಾರ ಪ್ಯಾಕೇಜಿನಡಿ ಸರ್ಕಾರದ ವತಿಯಿಂದ 25.00 ಕೋಟಿ ರೂ.ಗಳನ್ನು ಮತ್ತು ಅಪೆಕ್ಸ್ ವತಿಯಿಂದ 12.50 ಕೋಟಿ ರೂ.ಗಳನ್ನು ಭರಿಸಿಕೊಡಬೇಕಿದ್ದು ಸದರಿ ಹಣವನ್ನು ಪೂರ್ಣವಾಗಿ

ಸರ್ಕಾರ ಮತ್ತು ಅಪೆಕ್ಸ್ ಬ್ಯಾಂಕು ಭರಿಸಿಕೊಟ್ಟಿರುತ್ತವೆ. ಉಳಿದ 12.50 ಕೋಟಿ ರೂ.ಗಳನ್ನು ಬ್ಯಾಂಕು ಭರಿಸಬೇಕಾಗಿರುತ್ತದೆ.

ಇ) ಸೂಕ್ತ ಸಮಯದಲ್ಲಿ ಬ್ಯಾಂಕಿನ ಆಡಳಿತ ಮಂಡಳಿಗೆ ಚುನಾವಣೆ ಮಾಡಲಾಗುವುದು.

1201 (1284) ಶ್ರೀ ಎಸ್.ಎಸ್.ಪಾಟೀಲ್ (ಮುಂಡರಗಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಹಕಾರ ಸಂಸ್ಥೆಗಳೆಷ್ಟು;

ಆ) ಆ ಪೈಕಿ ಲಾಭ ಹಾಗೂ ನಷ್ಟದಲ್ಲಿರುವ ಸಂಸ್ಥೆಗಳೆಷ್ಟು (ವಿವರ ನೀಡುವುದು);

ಇ) ನಷ್ಟದಲ್ಲಿರುವ ಸಂಸ್ಥೆಗಳ ಪುನಃಶ್ಚೇತನಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಜಿ. ಟಿ. ದೇವೇಗೌಡ (ಸಹಕಾರ ಸಚಿವರು) :

ಅ) 32,997

ಆ) ಲಾಭದಲ್ಲಿರುವ ಸಹಕಾರ ಸಂಸ್ಥೆಗಳು 16,043
ನಷ್ಟದಲ್ಲಿರುವ ಸಹಕಾರ ಸಂಸ್ಥೆಗಳು 16,954

ಇ)

1) ಸಂಸ್ಥೆಗಳ ಆಡಳಿತ ಮಂಡಳಿಗಳನ್ನು ರದ್ದುಪಡಿಸಿ ಆಡಳಿತಾಧಿಕಾರಿಗಳನ್ನು ನೇಮಕಾತಿ ಮಾಡಲಾಗಿದೆ.
2) ಸರ್ಕಾರದ ಹಂತದಲ್ಲಿ ಉನ್ನತ ಮಟ್ಟದ ಸಭೆಗಳನ್ನು ಆಗಾಗ್ಗೆ ಜರುಗಿಸಲಾಗಿದೆ.
3) ಸಾಲ ವಸೂಲಾತಿಗಾಗಿ ವಿಕಕಾಲಿಕ ಸಾಲ ತೀರುವಳಿ ಯೋಜನೆಯನ್ನು ಜಾರಿಗೊಳಿಸಿದೆ.
4) ಸಂಸ್ಥೆಗಳ ಕೋರಿಕೆ ಮೇರೆಗೆ ಸಂಸ್ಥೆಗಳ ಸಾಲ ವಸೂಲಾತಿಗಾಗಿ ನೋಡಲ್ ಅಧಿಕಾರಿಗಳನ್ನು ನೇಮಿಸ ಲಾಗಿದೆ.
5) ಆರ್ಥಿಕ ಸಬಲತೆ ಹೊಂದಲು ಅವಕಾಶವಿರುವಂತಹ ಸಂಘಗಳಿಗೆ ಶೇರುಧನವನ್ನು ಮಂಜೂರು ಮಾಡಲಾ ಗುತ್ತಿದೆ.